**<u>ದಿನಾಂಕಃ 18.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ- 2ನೇ ಪ್ರತಿವಾದಿ ಪರ ಶ್ರೀ ಎಂ.ಕೆ.ಎನ್. ವಕೀಲರಿಂದ</u>**

1) 2ನೇ ಪ್ರತಿವಾದಿ ನನ್ನ ಹಾಗೂ 1ನೇ ಪ್ರತಿವಾದಿ ವಿರುದ್ಧ ವಿಭಾಗ ಕೋರಿ ದಾವೆ ಸಲ್ಲಿಸಿದ್ದು ಸದರಿ ದಾವೆಯಲ್ಲಿ ನಾನು ಸಲ್ಲಿಸಿರುವ ತಕರಾರಿನಲ್ಲಿ ಏನು ಅಂಶಗಳು ಬರದಿದೆ ಎಂದು ನನಗೆ ನೆನಪಿಲ್ಲ. ಸದರಿ ತಕರಾರಿನಲ್ಲಿ ಪ್ರತಿವಾದಿಗಳ ತಾಯಿ ಬೋರಮ್ಮ ನನಗೆ ದಾನ ಪತ್ರ ಬರೆದುಕೊಟ್ಟಿದ್ದರು ಎಂದು ನಮೂದಿಸಿದ್ದೇನೆ ಎಂದರೆ ಸರಿ. ಸದರಿ ದಾನ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ನೀವು ಯಾವಾ ಯಾವ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದು ತಿಳಿದುಕೊಂಡಿದ್ದೀರಾ ಎಂದರೆ ನನಗೆ ಗೊತ್ತಾಗುವುದಿಲ್ಲ. ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳು ನನ್ನ ಅಳಿಯ ನೀಡಿರುವ ದಾಖಲಾತಿಗಳು.

2) 1ನೇ ಪ್ರತಿವಾದಿ ಹಾಗೂ ಗಿರಿಜಾ ನಿಮಗೆ ಬರೆದುಕೊಡುವ ಸಮಯದಲ್ಲಿ ಅವರ ಹೆಸರಿನಲ್ಲಿ ಇತ್ತೇ ಎಂದರೆ ಹೌದು ಎಂದು ನುಡಿಯುತ್ತಾರೆ. ಅವರ ಹೆಸರಿನಲ್ಲಿ ಯಾವ ದಾಖಲಾತಿಗಳು ಇತ್ತು ಎಂದರೆ ಅದೆಲ್ಲಾ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಸದರಿಯವರ ಹೆಸರಿನಲ್ಲಿ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದಾದರೂ ದಾಖಲಾತಿಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಅದೆಲ್ಲಾ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ.

3) 2ನೇ ಪ್ರತಿವಾದಿ ಸಲ್ಲಿಸಿದ್ದ ದಾವೆ ಡಿಕ್ರಿಯಾಗಿದ್ದು ಸದರಿ ಡಿಕ್ರಿಯಂತೆ ದಾವಾ ಸ್ವತ್ತಿನಲ್ಲಿ 2ನೇ ಪ್ರತಿವಾದಿ ರವರಿಗೆ ಭಾಗ ನೀಡಲಾಯಿತು ಎಂದರೆ ಸಾಕ್ಷಿ ನಾನೇ ಅನುಭವದಲ್ಲಿ ಇದ್ದೇನೆ ಎಂದು ನುಡಿಯುತ್ತಾರೆ. ನನಗೆ 1ನೇ ಪ್ರತಿವಾದಿ ಹಾಗೂ ಅವರ ಪತ್ನಿ ಬರೆದುಕೊಟ್ಟಿರುವ ಪಂಚಾಯಿತಿ ಕ್ರಯ ಪತ್ರವನ್ನು ನೋಂದಣಿ

ಮಾಡಿಸಲಾಗಿದೆಯೇ ಎಂದರೆ ಸಾಕ್ಷಿ ನೋಂದಣಿ ಮಾಡಿಸಿ ನನ್ನ ಹೆಸರಿನಲ್ಲಿ ಖಾತೆ ಆಗಿದೆ ಎಂದು ನುಡಿಯುುತ್ತಾರೆ. ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂರದೆ ಇಲ್ಲ ಎಂದು ನುಡಿಯುತ್ತಾರೆ.

4) 1ನೇ ಪ್ರತಿವಾದಿ ಹಾಗೂ ಅವರ ಪತ್ನಿ ನಿಮಗೆ ಬರೆದುಕೊಡಲಾಗಿದೆ ಎಂದು ಹೇಳಲಾದ ದಾನಪತ್ರ ನೋಂದಣಿ ಆಗಿದೇಯೇ ಎಂದರೆ ಸಾಕ್ಷಿ ನಮ್ಮ ಯಜಮಾನರು ಮಾಡಿಸಿರುವುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2002 ರಲ್ಲಿ ಬರೆದುಕೊಟ್ಟ ಕ್ರಯದ ಕರಾರು ಪತ್ರಕ್ಕೆ ಸಂಬಂಧಪಟ್ಟಂತೇ, ಬರೆದುಕೊಟ್ಟವರ ವಿರುದ್ಧ ದಾವೆ ಸಲ್ಲಿಸಿದ್ದೀರಾ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ವಿಚಾರವಾಗಿ ನೀವು ನೋಟೀಸು ನೀಡಿದ್ದೀರಾ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿ ಬರೆದುಕೊಟ್ಟಿರುವ ದಾಖಲಾತಿಗಳ ವಿಚಾರ ನನಗೆ ಗೊತ್ತಿಲ್ಲ ಅದು ನಮ್ಮ ಅಳಿಯ ಮಾಡಿಸಿರುವುದು ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ.**
**ನ್ಯಾಯಾಲಯ, ಚನ್ನಪಟ್ಟಣ.**